KACD510019692024

THRINETHRA M N

Digitally signed by THRINETHRA M N
Date: 2026.03.27 15:24:35 +0530

Presented on : 25-07-2024
Registered on : 25-07-2024
Decided on : 23-03-2026
Duration: 1 years, 07 months, 29 days

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,ಹೊಸದುರ್ಗ.**

**ಉಪಸ್ಥಿತರುಃ-** ಶ್ರೀಮತಿ ತ್ರಿನೇತ್ರ ಎಂ. ಎನ್ , ಎಂ.ಎ., ಎಲ್.ಎಲ್.ಬಿ.,
ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಹೊಸದುರ್ಗ.

**ದಿನಾಂಕ 23 ನೇ ಮಾರ್ಚ್ 2026**

**ಅಸಲು ದಾವೆ ಸಂಖ್ಯೆಃ 450/2024**

**ವಾದಿ:-** ಶ್ರೀ ಪ್ರಹ್ಲಾದ ತಂದೆ ಲೇಟ್ ಗೋವಿಂದಪ್ಪ,
ವಯಸ್ಸು ಸುಮಾರು 59 ವರ್ಷ,
ವ್ಯವಸಾಯ ಮತ್ತು ಮಾಜಿ ಸೈನಿಕರು,
ವಾಸಃ ಎಂ. ಜಿ ದಿಬ್ಬ ಗ್ರಾಮ,
ಕಸಬಾ ಹೋಬಳಿ, ಹೊಸದುರ್ಗ ತಾಲ್ಲೂಕು,

(ವಾದಿಯ ಪರ ವಕೀಲರು - ಶ್ರೀ ಜಿ. ಬಸವಲಿಂಗಪ್ಪ)

**ವಿರುದ್ಧ**

**ಪ್ರತಿವಾದಿಗಳು:**

1) ಶ್ರೀಮತಿ ನಾಗಮ್ಮ
ಕೋಂ ಲೇಟ್ ತಿಮ್ಮಯ್ಯ,
ವಯಸ್ಸು ಸುಮಾರು 85 ವರ್ಷ,
ಮನೆಗೆಲಸ,

2) ಶ್ರೀ ಹನುಮಂತಪ್ಪ

ಬಿನ್ ಲೇಟ್ ತಿಮ್ಮಯ್ಯ,
ವಯಸ್ಸು ಸುಮಾರು 59 ವರ್ಷ,
ವ್ಯವಸಾಯ,

3) ಶ್ರೀ ಶಿವಮೂರ್ತಿ
ಬಿನ್ ಲೇಟ್ ತಿಮ್ಮಯ್ಯ,
ವಯಸ್ಸು ಸುಮಾರು 57 ವರ್ಷ,
ವ್ಯವಸಾಯ,

4) ಶ್ರೀ ರಾಜಪ್ಪ ,
ಬಿನ್ ಲೇಟ್ ತಿಮ್ಮಯ್ಯ,
ವಯಸ್ಸು ಸುಮಾರು 55 ವರ್ಷ,
ವ್ಯವಸಾಯ,

5) ಶ್ರೀ ಮೂಡ್ಲಪ್ಪ ,
ಬಿನ್ ಲೇಟ್ ಗೋವಿಂದಪ್ಪ ,
ವಯಸ್ಸು ಸುಮಾರು 62 ವರ್ಷ,
ವ್ಯವಸಾಯ,

6) ಶ್ರೀ ಶಿವಣ್ಣ ,
ಬಿನ್ ಲೇಟ್ ಗೋವಿಂದಪ್ಪ ,
ವಯಸ್ಸು ಸುಮಾರು 57 ವರ್ಷ,
ವ್ಯವಸಾಯ,

7) ಶ್ರೀ ಎಂ. ಹೆಚ್ ಬಸವರಾಜ ,
ಬಿನ್ ಲೇಟ್ ಸೀತಾರಾಮಯ್ಯ ,
ವಯಸ್ಸು ಸುಮಾರು 63 ವರ್ಷ,
ವ್ಯವಸಾಯ,

8) ಶ್ರೀ ಯತೀಶ್ ಕುಮಾರ್ ,
ಬಿನ್ ಲೇಟ್ ಸೀತಾರಾಮಯ್ಯ ,
ವಯಸ್ಸು ಸುಮಾರು 60 ವರ್ಷ,
ವ್ಯವಸಾಯ,

ಪ್ರತಿವಾದಿ 1 ರಿಂದ 8 ರವರ ವಾಸಃ
ಎಂ . ಜಿ ದಿಬ್ಬ ಗ್ರಾಮ,
ಕಸಬಾ ಹೋಬಳಿ, ಹೊಸದುರ್ಗ ತಾಲೂಕು.

(ಪ್ರತಿವಾದಿ-1 ರಿಂದ 4 ಪರ ವಕೀಲರು :ಶ್ರೀ ಈರಬಸಪ್ಪ)
(ಪ್ರತಿವಾದಿ-5, 6 ಮತ್ತು 8 ಏಕಪಕ್ಷೀಯವಾಗಿರುತ್ತಾರೆ)
(ಪ್ರತಿವಾದಿ-7 ರವರು ಸ್ವಯಂ ಹಾಜರಾಗಿರುತ್ತಾರೆ)

| | | |
|---|---|---|
| ದಾವೆ ದಾಖಲು ಮಾಡಿದ ದಿನಾಂಕ | - | 25.07.2024 |
| ದಾವಾ ಸ್ವರೂಪ | - | ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಸಲ್ಲಿಸಿದ ದಾವೆ |
| ಸಾಕ್ಷಿ ದಾಖಲು ಮಾಡಲು ಪ್ರಾರಂಭಿಸಿದ ದಿನಾಂಕ | - | 21.11.2024 |
| ತೀರ್ಪು ಘೋಷಣೆ ಮಾಡಿದ ದಿನಾಂಕ | - | 23.03.2026 |

| | | ವರ್ಷಗಳು | ತಿಂಗಳು | ದಿನಗಳು |
|---|---|---|---|---|
| ಒಟ್ಟು ಕಾಲಾವಧಿ | - | -01- | -07- | -29- |

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಸದುರ್ಗ.**


**ತೀರ್ಪು**

ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಗಳ ವಿರುದ್ಧ ಸಲ್ಲಿಸಿ, ದಾವಾ ಅನುಸೂಚಿ ಸ್ವತ್ತುಗಳಾದ ಹೊಸದುರ್ಗ ತಾಲೂಕು, ಕಸಬಾ ಹೋಬಳಿ, ಬೋಕಿಕೆರೆ ಗ್ರಾಮದ ಸ.ನಂ. 91/2 ಸಿ, 1 ಎಕರೆ 33 ಗುಂಟೆ, ಕಸಬಾ ಹೋಬಳಿ, ಮಳಲಿ ಗ್ರಾಮದ ಸ.ನಂ. 264/*, 16 ಎಕರೆ 21 ಗುಂಟೆ, ಕಸಬಾ ಹೋಬಳಿ, ಮಳಲಿ ಗ್ರಾಮದ ಸ.ನಂ. 271/*, 22 ಎಕರೆ 22 ಗುಂಟೆ, ಕಸಬಾ ಹೋಬಳಿ, ಚನ್ನಸಮುದ್ರ ಗ್ರಾಮದ ಸ.ನಂ. 41/9, 2 ಎಕರೆ 00 ಗುಂಟೆ, ಕಸಬಾ ಹೋಬಳಿ, ಕ್ಯಾದಿಗೆರೆ ಕಾವಲು ಗ್ರಾಮದ ಸ.ನಂ. 31/4, 01 ಎಕರೆ 39 ಗುಂಟೆ, ಕಸಬಾ ಹೋಬಳಿ, ಕ್ಯಾದಿಗೆರೆ ಕಾವಲು ಗ್ರಾಮದ ಸ.ನಂ. 24/1, 4 ಎಕರೆ 32 ಗುಂಟೆ ಮತ್ತು ಕಸಬಾ ಹೋಬಳಿ, ಮಾಚೇನಳ್ಳಿ ಗ್ರಾಮದ ಸ.ನಂ. 34/4, 2 ಎಕರೆ 36 ಗುಂಟೆಗೆ ಸಂಬಧಿಸಿದಂತೆ ವಾದಿಗೆ ಸದರಿ

ಆಸ್ತಿಯಲ್ಲಿ ಅವರ ಭಾಗದ ಹಿಸ್ಸೆಯನ್ನು ಕೋರಿ ಹಾಗೂ ಸದರಿ ವಾದಿಯ ಪಾಲಿನ ಹಿಸ್ಸೆಯ ಪ್ರತ್ಯೇಕ ಸ್ವಾಧೀನ ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ.

2. **ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ:-**

ವಾದಿ ಮತ್ತು ಪ್ರತಿವಾದಿಯರ ನಡುವಿನ ಸಂಬಂಧವನ್ನು ತೋರಿಸುವ ಸಲುವಾಗಿ ವಂಶವೃಕ್ಷವು ಈ ಕೆಳಗಿನಂತೆ ಇರುತ್ತದೆ.



ಮುದ್ದಪ್ಪ (D-5) ಪ್ರಹ್ಲಾದ (Plaintiff) ಶಿವಣ್ಣ (D-6)

ಎಂ.ಹೆಚ್ ಬಸವರಾಜ (D-7) ಯತೀಶ್ ಕುಮಾರ (D-8)

ವಾದಿಯು ತನ್ನ ವಾದ ಪತ್ರದಲ್ಲಿ ಹೇಳುವುದೇನೆಂದರೆ, ಮೂಲಪುರುಷ ಹನುಮಂತಪ್ಪ ಇವರಿಗೆ ಇಬ್ಬರು ಪತ್ನಿಯರು ಇದ್ದು ಮೊದಲನೆಯವರು ದೊಡ್ಡಮ್ಮ ಎರಡನೆಯವರು ಸಿದ್ದಮ್ಮ ಆಗಿರುತ್ತಾರೆ. ದೊಡ್ಡಮ್ಮ ಇವರಿಗೆ ತಿಮ್ಮಯ್ಯ ಎಂಬ ಮಗನಿದ್ದು ಅವರ ಹೆಂಡತಿ ಕರಿಯಮ್ಮ ಆಗಿರುತ್ತಾರೆ ಮತ್ತು ಅವರಿಗೆ ಮಳಿಯಮ್ಮ ಲಕ್ಷ್ಮಮ್ಮ ಮತ್ತು ಗೌರಮ್ಮ ಎನ್ನುವ ಮೂರು ಜನ ಮಕ್ಕಳಿದ್ದು ಎಲ್ಲರೂ ಮರಣ ಹೊಂದಿರುವುದಾಗಿ ತಿಳಿಸಿರುತ್ತಾರೆ. ಎರಡನೇ ಪತ್ನಿಯಾದ ಸಿದ್ದಮ್ಮ ಇವರಿಗೆ ತಿಮ್ಮಯ್ಯ, ಗೋವಿಂದಪ್ಪ ಮತ್ತು ಸೀತಾರಾಮಯ್ಯ ಎಂಬ 3 ಜನ ಮಕ್ಕಳಿದ್ದು ಮೊದಲನೇ ಮಗ ತಿಮ್ಮಯ್ಯ ಇವರಿಗೆ ನಾಗಮ್ಮ ಎಂಬ ಪತ್ನಿಯಿದ್ದು ಅವರು ಪ್ರತಿವಾದಿ-1 ಆಗಿರುತ್ತಾರೆ ಅವರಿಗೆ 3 ಜನ ಮಕ್ಕಳಿದ್ದು ಹನುಮಂತಪ್ಪ, ಶಿವಮೂರ್ತಿ ಮತ್ತು ರಾಜಪ್ಪ ಆಗಿರುತ್ತಾರೆ. ಹನುಮಂತಪ್ಪ ಪ್ರತಿವಾದಿ-2, ಶಿವಮೂರ್ತಿ ಪ್ರತಿವಾದಿ-3, ರಾಜಪ್ಪ ಪ್ರತಿವಾದಿ-4 ಆಗಿರುತ್ತಾರೆ.

2 ನೇ ಮಗನಾದಂತಹ ಗೋವಿಂದಪ್ಪ ಇವರಿಗೆ ಬಸಮ್ಮ ಎಂಬ ಹೆಂಡತಿ ಇದ್ದು ಇಬ್ಬರೂ ಮರಣ ಹೊಂದಿರುತ್ತಾರೆ. ಅವರಿಗೆ 3 ಜನ

ಮಕ್ಕಳಿದ್ದು ಮುದ್ದಪ್ಪ ಪ್ರತಿವಾದಿ-5, ಪ್ರಹ್ಲಾದ ವಾದಿ, ಶಿವಣ್ಣ ಪ್ರತಿವಾದಿ -6 ಆಗಿರುತ್ತಾರೆ. 3 ನೇ ಮಗನಾದ ಸೀತಾರಾಮಯ್ಯ ಇವರಿಗೆ ಕಲಮ್ಮ ಎಂಬ ಪತ್ನಿ ಇದ್ದು ಇಬ್ಬರೂ ಸಹ ಮರಣ ಹೊಂದಿದ್ದು ಅವರಿಗೆ ಎಂ ಹೆಚ್ ಬಸವರಾಜು ಪ್ರತಿವಾದಿ - 7 ಮತ್ತು ಎಂ ಹೆಚ್ ಯತೀಶ್ ಕುಮಾರ್ ಪ್ರತಿವಾದಿ - 8 ಆಗಿರುತ್ತಾರೆ ಎಂದು ತಿಳಿಸಿರುತ್ತಾರೆ.

ವಾದಿಯು ತನ್ನ ಅಜ್ಜನಾದ ಹನುಮಂತಪ್ಪ ಇವರು ದಾವಾ ಸ್ವತ್ತುಗಳನ್ನು ವಂಶ ಪಾರಂಪರ್ಯವಾಗಿ ಪಡೆದುಕೊಂಡಿರುತ್ತಾರೆ ಎಂಬುದಾಗಿ ತಿಳಿಸಿದ್ದು ಸದರಿ ದಾವಾ ಸ್ವತ್ತುಗಳನ್ನು ತನ್ನ ಇಬ್ಬರು ಪತ್ನಿಯರು ಮತ್ತು ಅವರ ಮಕ್ಕಳೊಂದಿಗೆ ವಂಶ ಪಾರಂಪರ್ಯವಾಗಿ ಅನುಭವಿಸಿಕೊಂಡು ಬಂದಿರುವುದಾಗಿ ತಿಳಿಸಿದ್ದು, ಹನುಮಂತಪ್ಪನವರ ಮೊದಲನೇ ಹೆಂಡತಿ ಮತ್ತು ಅವರ ಮಕ್ಕಳು ಮರಣ ಹೊಂದಿದ ನಂತರ 2 ನೇ ಹೆಂಡತಿಯ ಮಕ್ಕಳು ಮರಣ ಹೊಂದಿದ ನಂತರ ಅವರ ಮಕ್ಕಳಾದ ವಾದಿ ಮತ್ತು ಪ್ರತಿವಾದಿಯರು ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದುದರಿಂದ ಜಂಟಿಯಾಗಿ ಅನುಭವಿಸಿಕೊಂಡು ಬಂದಿರುತ್ತಾರೆ. ಹನುಮಂತಪ್ಪ, ತಿಮ್ಮಯ್ಯ, ಗೋವಿಂದಪ್ಪ ಮತ್ತು ಸೀತಾರಾಮಯ್ಯ ಇವರು ವಾದಿ ಮತ್ತು ಪ್ರತಿವಾದಿಯರ ಒಟ್ಟು ಸದಸ್ಯರಾಗಿದ್ದು ಮರಣ ಹೊಂದಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು 2 ನೇ ಪ್ರತಿವಾದಿಯು ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಮುಖ್ಯಸ್ಥನಾಗಿರುತ್ತಾನೆ. ದಾವಾ ಸ್ವತ್ತುಗಳು ಪ್ರತಿವಾದಿ-2 ರಿಂದ 4 ರವರ ಜಂಟಿ ಹೆಸರಿನಲ್ಲಿ ಇರುತ್ತದೆ. ಪ್ರತಿವಾದಿಗಳಿಗೆ ಮಾತ್ರ ಯಾವುದೇ ಸ್ವತಂತ್ರವಾದ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ. ಪ್ರತಿವಾದಿ-1 ರವರು ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಕರ್ತನಾಗಿರುತ್ತಾರೆ. ಪ್ರತಿವಾದಿಗಳು ವಾದಿಯು ತನ್ನ ಪಾಲಿಗೆ

ಬರಬೇಕಾದಂತಹ ಆಸ್ತಿಯನ್ನು ಕೇಳಿದಾಗ ನಿರಾಕರಿಸಿರುತ್ತಾರೆ. 2024 ಜುಲೈ ತಿಂಗಳ 2 ನೇ ವಾರ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ವಾದಿಗೆ ವಿಭಾಗ ಕೊಡಲು ನಿರಾಕರಿಸಿದ್ದರಿಂದ ದಾವಾ ಕಾರಣ ಉಂಟಾಗಿರುತ್ತದೆ. ಆದ್ದರಿಂದ, ದಾವೆಯಲ್ಲಿ ಕೇಳಿದಂತೆ ತನ್ನ ಪರ ಡಿಕ್ರಿ ಮಾಡಬೇಕೆಂದು ವಾದಿ ಪ್ರಾರ್ಥಿಸಿಕೊಂಡಿರುತ್ತಾನೆ.

**3.** ಪ್ರತಿವಾದಿಗಳಿಗೆ ದಾವೆಯ ಸಮನ್ಸನ್ನ ಕಳುಹಿಸಲಾಗಿ, ಪ್ರತಿವಾದಿ-5, 6 ಮತ್ತು 8 ರವರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ ಅವರನ್ನು ಏಕಪಕ್ಷಿಯ ಎಂದು ಪರಿಗಣಿಸಲಾಗಿದೆ. ಪ್ರತಿವಾದಿ-1 ರಿಂದ 4 ರವರು ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿ-7 ರವರು ಸ್ವಯಂ ಹಾಜರಾಗಿರುತ್ತಾರೆ, ಆದರೆ ತಮ್ಮ ಪರವಾಗಿ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

**4. <u>1 ರಿಂದ 4 ನೇ ಪ್ರತಿವಾದಿಯರ ಲಿಖಿತ-ಹೇಳಿಕೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-</u>**

1 ರಿಂದ 4 ನೇ ಪ್ರತಿವಾದಿಯರು ವಾದ ಪತ್ರದ ಅಂಶಗಳನ್ನು ಹಾಗೂ ವಂಶವೃಕ್ಷವನ್ನು ಅಲ್ಲಗಳೆದಿದ್ದು, 1 ನೇ ಪ್ರತಿವಾದಿ ನಾಗಮ್ಮಳು ಲೇಟ್ ತಿಮ್ಮಯ್ಯನ ಹೆಂಡಿತಿಯಾಗಿರುತ್ತಾಳೆ. ಸದರಿ ನಾಗಮ್ಮ ಲೇಟ್ ತಿಮ್ಮಯ್ಯನವರಿಗೆ ಮೂರು ಜನ ಮಕ್ಕಳಿದ್ದು ಅವರುಗಳೆಂದರೆ, ಪ್ರತಿವಾದಿ-2 ರಿಂದ 4 ರವರು ಆಗಿರುತ್ತಾರೆ 1 ನೇ ಪ್ರತಿವಾದಿಯ ಗಂಡ ಲೇಟ್ ತಿಮ್ಮಯ್ಯ ಇವನು ಮೃತ ಹನುಮಂತಪ್ಪನ ಒಂದನೇ ಮಗನಾಗಿರುತ್ತಾನೆ. ಮೃತ ಹನುಮಂತಪ್ಪನಿಗೆ ದೊಡ್ಡಮ್ಮ ಎನ್ನುವ ಒಬ್ಬಳೇ ಹೆಂಡತಿ ಇದ್ದು ಅವರು ಸಹ ಮೃತ ಹೊಂದಿರುತ್ತಾರೆ. ಸದರಿ ಹನುಮಂತಪ್ಪ ಮತ್ತು ಮೃತ ದೊಡ್ಡಮ್ಮ ಇವರಿಗೆ ಮೂರು ಜನ ಗಂಡು ಮಕ್ಕಳಿದ್ದು ಅವರುಗಳೆಂದರೇ,

1 ನೇ ತಿಮ್ಮಯ್ಯ, (1 ನೇ ಪತಿವಾದಿಯ ಗಂಡ. 3 ರಿಂದ 4 ರವರ ತಂದೆ) 2 ನೇ ಗೋವಿಂದಪ್ಪ , 3 ನೇ ಸೀತರಾಮಯ್ಯ ಇರುತ್ತಾರೆ. ಸದರಿ ತಿಮ್ಮಯ್ಯ ಮತ್ತು ನಾಗಮ್ಮ ಇವರಿಗೆ ಮೂರು ಜನ ಗಂಡುಮಕ್ಕಳಿದ್ದು 1 ನೇ ಹನುಮಂತಪ್ಪ (2 ನೇ ಪ್ರತಿವಾದಿ) 2 ನೇ ಶಿವಮೂರ್ತಿ (3 ನೇ ಪ್ರತಿವಾದಿ), 3 ನೇ ರಾಜಪ್ಪ (4 ನೇ ಪ್ರತಿವಾದಿ) ಇರುತ್ತಾರೆ ನಂತರ ಮೃತ ಹನುಮಂತಪ್ಪನ 2 ನೇ ಮಗ ಗೋವಿಂದಪ್ಪ ಮೃತ ಹೊಂದಿದ್ದು ಇವರಿಗೆ ಒಟ್ಟು ಮೂರು ಜನ ಮಕ್ಕಳಿರುತ್ತಾರೆ.

1 ನೇ ಮುದ್ದಪ್ಪ (5 ನೇ ಪ್ರತಿವಾದಿ) 2 ನೇ ಪ್ರಹಲ್ಲಾದ (ವಾದಿ) 3 ನೇ ಶಿವಣ್ಣ (6 ನೇ ಪ್ರತಿವಾದಿ) ಇರುತ್ತಾರೆ ನಂತರ ಮೃತ ಹನುಮಂತಪ್ಪನ ಮೂರನೆಯ ಮಗ ಸೀತಾರಾಮಯ್ಯ ಅವರು ಸಹ ಮರಣ ಹೊಂದಿರುತ್ತಾರೆ. ಇವರಿಗೆ 2 ಜನ ಮಕ್ಕಳಿದ್ದು ಅವರುಗಳೆಂದರೇ. 1 ನೇ ಎಂ.ಹೆಚ್ ಬಸವರಾಜ (7 ನೇ ಪ್ರತಿವಾದಿ) ಹಾಗೂ 2 ನೇ ಯತೀಶ್ ಕುಮಾರ್ (8 ನೇ ಪ್ರತಿವಾದಿ) ಇರುತ್ತಾರೆ. 1 ನೇ ಪ್ರತಿವಾದಿಯ ಗಂಡ ತಿಮ್ಮಯ್ಯನವರು ದಿಃ 05.12.1988 ರಂದು ಮರಣ ಹೊಂದಿರುತ್ತಾರೆ. 1 ನೇ ಪ್ರತಿವಾದಿಯ ಮಾವ ಅಂದರೇ 1 ನೇ ಪ್ರತಿವಾದಿಯ ಗಂಡನ ತಂದೆ ಪ್ರತಿವಾದಿ ಸಂಖ್ಯೆ 2 ರಿಂದ 4 ರವರ ಅಜ್ಜ ಹನುಮಂತಪ್ಪನವರು ಅವರ ಜೀವಿತಾವಧಿಯಲ್ಲಿ ದೊಡ್ಡಮ್ಮ ಇವರನ್ನು ವಿವಾಹವಾಗಿದ್ದು ಒಬ್ಬಳೇ ಹೆಂಡತಿ ಇರುತ್ತಾರೆ.

ವಾದಿಯು ದಾವೆಯ 2 ನೇ ಪ್ಯಾರಾದಲ್ಲಿ ಹೇಳಿರುವಂತೆ ವಂಶವೃಕ್ಷದಲ್ಲಿ ಹನುಮಂತಪ್ಪನವರಿಗೆ ಇಬ್ಬರು ಹೆಂಡತಿಯರು ಯಾವತ್ತೂ ಇರುವುದಿಲ್ಲ. ಮೃತ ಹನುಮಂತಪ್ಪನವರು ಅವರ ಜೀವಿತ ಕಾಲದಲ್ಲಿ ಒಬ್ಬಳೇ ಹೆಂಡತಿ ದೊಡ್ಡಮ್ಮನನ್ನ ಮಾತ್ರ ಮದುವೆಯಾಗಿರುತ್ತಾನೆ. ವಾದಿಯು ದಾವೆಯಲ್ಲಿ ಹೇಳಿದಂತೆ ಮೃತ ಹನುಮಂತಪ್ಪನ 2 ನೇ ಹೆಂಡತಿ ಸಿದ್ದಮ್ಮ ಎನ್ನುವವರನ್ನು ಹನುಮಂತಪ್ಪನವರು ಯಾವತ್ತೂ ವಿವಾಹವಾಗಿರುವುದಿಲ್ಲ ಹಾಗೂ ಮೃತ

ಸಿದ್ದಮ್ಮನವರು ಮೃತ ಹನುಮಂತಪ್ಪನ 2ನೇ ಹೆಂಡತಿ ಆಗುವುದಕ್ಕೆ ಸಾದ್ಯವಿರುವುದಿಲ್ಲ. 1ನೇ ಪ್ರತಿವಾದಿಯ ನಾಗಮ್ಮಳ ಗಂಡನ ತಂದೆ ಮೃತ ಹನುಮಂತಪ್ಪ ಮತ್ತು ಈತನ ಸಹೋದರ ಬಡಕಪ್ಪ ಎನ್ನುವ ಇವರಿಬ್ಬರೂ ಒಂದೇ ತಾಯಿಯ ಮಕ್ಕಳು ಇರುತ್ತಾರೆ. ಸದರಿ ಮೃತ ಹನುಮಂತಪ್ಪನ ತಮ್ಮ ಬಡಕಪ್ಪನಿಗೆ ತಿಮ್ಮಯ್ಯ ಎನ್ನುವ ಒಬ್ಬನೇ ಮಗನಿದ್ದು ಈಗ ಆತನು ಮೃತ ಹೊಂದಿರುತ್ತಾನೆ. ಸದರಿ ಬಡಕಪ್ಪನ ಮಗ ಮೃತ ತಿಮ್ಮಯ್ಯನವರಿಗೆ ಮೂರು ಜನ ಹೆಣ್ಣುಮಕ್ಕಳಿದ್ದು 1ನೇ ಮಲಿಯಮ್ಮ. 2ನೇ ಲಕ್ಷ್ಮಮ್ಮ. 3ನೇ ಗೌರಮ್ಮ ಎನ್ನುವವರು ಇದ್ದು ಅವರಿಗೆ ವಿವಾಹವಾಗಿ ನಂತರ 3 ಜನರು ಮೃತಹೊಂದಿರುತ್ತಾರೆ.

ಪ್ರತಿವಾದಿಯರು ಮುಂದುವರೆದು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳುವುದೇನೆಂದರೆ, 1ನೇ ಪ್ರತಿವಾದಿಯ ಗಂಡ ತಿಮ್ಮಯ್ಯ ಹಾಗೂ ವಾದಿಯ ಮತ್ತು 5 ಮತ್ತು 6ನೇ ಪ್ರತಿವಾದಿಯ ತಂದೆ ಗೋವಿಂದಪ್ಪ ನಂತರ ಪ್ರತಿವಾದಿ ಸಂಖ್ಯೆ 7 ಮತ್ತು 8 ರವರ ತಂದೆ ಮೃತ ಸೀತಾರಾಮಯ್ಯರವರು ಅವರ ಜೀವಿತ ಕಾಲದಲ್ಲಿ ಮೂರು ಜನ ಅಣ್ಣ ತಮ್ಮಂದಿರು ಪಾಲುವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ತಮ್ಮ ತಮ್ಮ ಹಿಸ್ಸೆಗೆ ಬಂದಂತಹ ಜಮೀನುಗಳನ್ನು ಅನುಭವಿಸುತ್ತಿದ್ದು , ಅವರವರ ತಂದೆಯವರು ಮರಣ ಹೊಂದಿದ ಬಳಿಕ ಅವರವರ ಮಕ್ಕಳು ಅವರವರ ಹಿಸ್ಸಾ ಭಾಗಕ್ಕೆ ಬಂದಂತಹ ಸ್ವತ್ತುಗಳನ್ನು ಅನುಭವಿಸಿಕೊಂಡು ಬಂದಿರುತ್ತಾರೆ. 1ನೇ ಪ್ರತಿವಾದಿಯ ಗಂಡ ಹಾಗೂ 2 ರಿಂದ 4ನೇ ಪ್ರತಿವಾದಿಯರ ತಂದೆ ತಿಮ್ಮಯ್ಯನು ಮತ್ತು ಈತನ ಇನ್ನುಳಿದ ಇಬ್ಬರೂ ಸಹೋದರರುಗಳಾದ ಗೋವಿಂದಪ್ಪ ಮತ್ತು ಸೀತಾರಾಮಯ್ಯ ಇವರುಗಳು ತಮ್ಮ ಜೀವಿತ ಕಾಲದಲ್ಲಿ ಪಿತ್ರಾರ್ಜಿತವಾಗಿ ಬಂದಂತಹ ದಾವ ಐಟಂ ಸ್ವತ್ತುಗಳಾದ 4ರಿಂದ 7ರ ಸ್ವತ್ತುಗಳನ್ನು 3 ಜನ ಸಹೋದರರು ಸರಿ ಸಮನಾಗಿ ಹಂಚಿಕೊಂಡು ತಮ್ಮ ಹಿಸ್ಸೆಗೆ ಬಂದಂತಹ ಪಿತ್ರಾರ್ಜಿತ ಸ್ವತ್ತುಗಳನ್ನು ಅನುಭವಿಸಿಕೊಂಡು ಒಂದಿರುತ್ತಾರೆ.

1ನೇ ಪ್ರತಿವಾದಿಯ ಗಂಡ ತಿಮ್ಮಯ್ಯನು ಮತ್ತು ಈತನ ಇಬ್ಬರು ಸಹೋದರರುಗಳಾದ ಗೋವಿಂದಪ್ಪ ಮತ್ತು ಸೀತಾರಾಮಯ್ಯನವರು ಪಾಲು ವಿಭಾಗ ಮಾಡಿಕೊಂಡ ನಂತರ ದಾವಾ ಐಟಂ 1 ರಿಂದ 3ನೇ ಸ್ವತ್ತುಗಳು 1ನೇ ಪ್ರತಿವಾದಿಯ ಗಂಡ ತಿಮ್ಮಯ್ಯನು ಸ್ವಯಾರ್ಜಿತವಾಗಿ ಗಳಿಸಿದಂತಹ ಸ್ವತ್ತುಗಳಾಗಿರುತ್ತವೆ. ವಾದಿಯು ತನ್ನ ದಾವೆಯಲ್ಲಿ ಹೇಳಿರುವ ದಾವಾ ಸ್ವತ್ತು 4 ರಿಂದ 7 ನೇ ಸ್ವತ್ತುಗಳು 1ನೇ ಪ್ರತಿವಾದಿಯ ಮಾವ ಹಾಗೂ ವಾದಿ ಮತ್ತು ಇನ್ನುಳಿದ ಪ್ರತಿವಾದಿಗಳ ಅಜ್ಜ ಮೃತ ಹನುಮಂತಪ್ಪನ ಜೀವಿತ ಕಾಲದಲ್ಲಿ ಸಂಪಾದಿಸಿದ ಸ್ವತ್ತುಗಳಾಗಿರುತ್ತವೆ. ವಾದಿಯು ನೈಜಾಂಶವನ್ನು ಮರೆಮಾಚಿ 1 ರಿಂದ 4ನೇ ಪ್ರತಿವಾದಿಗಳ ವಿರುದ್ಧ ಪಾಲು ವಿಭಾಗದ ಸುಳ್ಳು ದಾವೆಯನ್ನು ಹೂಡಿರುತ್ತಾರೆ. ಆದ್ದರಿಂದ, ವಾದಿಯ ದಾವೆಯನ್ನು ಖರ್ಚ ಸಹಿತ ವಜಾಗೊಳಿಸಬೇಕೆಂದು ಪ್ರತಿವಾದಿಯರು ಪ್ರಾರ್ಥಿಸಿಕೊಂಡಿರುತ್ತಾರೆ.

**5**. ವಾದ ಪತ್ರ, ಲಿಖಿತ ಹೇಳಿಕೆ ಹಾಗೂ ದಾಖಲೆಗಳನ್ನು ಅವಲೋಕಿಸಿ, ಈ ನ್ಯಾಯಾಲಯ ವಿವಾದಾಂಶಗಳನ್ನು ಈ ಕೆಳಕಂಡಂತೆ ರಚಿಸಿರುತ್ತದೆ:-

1. Whether the plaintiff proves that , plaintiff and defendants are the members of joint family?
2. Whether the plaintiff proves that, suit schedule properties are an ancestral and joint family properties of plaintiff and defendants?
3. Whether the plaintiff is entitled to the relief of partition and separate possession? If so, as to what share?
4. What order or decree?

**6.** ವಾದ ಪತ್ರದಲ್ಲಿ ಆರೋಪಿಸಿರುವಂತಹ ಅಂಶಗಳನ್ನು ಸಾಬೀತುಪಡಿಸಲು ವಾದಿ ತಾನು ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, 07 ದಾಖಲೆಗಳನ್ನು ನಿಪಿ.1 ರಿಂದ 7 ಎಂದು ಗುರುತಿಸಿಕೊಂಡು, ತನ್ನ ಪರ ಸಾಕ್ಷಿ-ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾನೆ.

**7.** ಲಿಖಿತ ಹೇಳಿಕೆಯಲ್ಲಿ ಆರೋಪಿಸಿರುವ ಅಂಶಗಳನ್ನು ಸಾಬೀತುಪಡಿಸಲು, ಪ್ರತಿವಾದಿಯರು ಯಾವುದೇ ಸಾಕ್ಷಿ-ವಿಚಾರಣೆಯನ್ನು ಮಾಡಿಸಿರುವುದಿಲ್ಲ ಮತ್ತು ಯಾವುದೇ ದಾಖಲಾತಿಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡಿರುವುದಿಲ್ಲ.

**8.** ವಾದಿ ಮತ್ತು ಪ್ರತಿವಾದಿಗಳ ಪರ ವಕೀಲರ ವಾದವನ್ನು ಆಲಿಸಲಾಯಿತು.

**9.** ವಾದಪತ್ರ, ಲಿಖಿತ-ಹೇಳಿಕೆ ಮತ್ತು ಉಭಯ ಪಕ್ಷಗಾರರ ಪರ ಇರುವಂತಹ ಮೌಖಿಕ ಹಾಗೂ ದಾಖಲಾತಿ ಸಾಕ್ಷಿ ಮತ್ತು ಈ ಕೇಸಿನ ವಸ್ತು-ಸ್ಥಿತಿ ಹಾಗೂ ಸಂದರ್ಭಗಳನ್ನ ಅವಲೋಕಿಸಿ, ಮೇಲಿನ ವಿವಾದಾಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

| | |
|---|---|
| ವಿವಾದಾಂಶ -1 - | ಸಕಾರಾತ್ಮಕ |
| ವಿವಾದಾಂಶ -2 - | ಭಾಗಶಃ ಸಕಾರಾತ್ಮಕ |
| ವಿವಾದಾಂಶ -3 - | ಭಾಗಶಃ ಸಕಾರಾತ್ಮಕ |
| ವಿವಾದಾಂಶ -4 - | ಅಂತಿಮ ಆದೇಶದಂತೆ |

**ಕಾರಣಗಳು**

**10.** ವಿವಾದಾಂಶ-1 ಮತ್ತು 2ಃ ಈ ವಿವಾದಾಂಶಗಳು ಮೇಲ್ನೋಟಕ್ಕೆ ಬೇರೆ ಬೇರೆಯಾಗಿ ಕಂಡುಬಂದರೂ ಸಹ ಆಂತರಿಕವಾಗಿ ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಹಾಗೂ ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಒಟ್ಟಿಗೆ ವಿಮರ್ಶೆಗೆ

ತೆಗೆದುಕೊಳ್ಳಲಾಗಿದೆಃ-

11. ದಿವಾನಿ ಸ್ವರೂಪದ ದಾವೆಗಳಲ್ಲಿ ಸಾಮಾನ್ಯವಾಗಿ ತೀರ್ಪು ನೀಡಲು **ಸಂಭಾವನೀಯತೆಯ ಬಾಹ್ಯಯುಳ್ಳತೆ ನಿಯಮದ** ಆಧಾರದ ಮೇರೆಗೆ ತೀರ್ಪನ್ನು ನೀಡಬಹುದಾಗಿದೆ. ಹಾಗಾಗಿ ಪ್ರತಿವಾದಿಯ ವಿರುದ್ಧ ವಾದಿಯು ಕೋರಿರುವ ಪರಿಹಾರವನ್ನು ಪಡೆಯಲು ವಾದಿಯು ಅರ್ಹರಾಗಿರುತ್ತಾರೆ ಎಂಬುದನ್ನು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 101 ರಿಂದ 103 ರಲ್ಲಿ ನಿರ್ದಿಷ್ಟ ಪಡಿಸಿರುವ ರುಜುವಾತಿನ ಭಾರವನ್ನು ವಾದಿಯು ಹೊಂದಿ ACTORI-INCUMBIT-ONUS-PROBANDI ಕಾನೂನಿನ ತತ್ವದ ಅನುಸಾರ ದಾವೆಯನ್ನು ಸಮರ್ತಿಸಬೇಕಾಗಿದ್ದು, ವಾದಿಯು ತನ್ನ ಕಾಲಿನ ಮೇಲೆ ತಾನೇ ನಿಂತು ತನ್ನ ದಾವೆಯನ್ನು ಸಾಬೀತುಪಡಿಸುವ ಹೊಣೆಗಾರಿಕೆ ತನ್ನ ಮೇಲೆ ಹೊತ್ತಿರುತ್ತಾನೆ. ಹಾಗೆಯೇ ಪ್ರತಿವಾದಿಯ ಪ್ರಕರಣದ ಬಲಹೀನತೆಯ ಲಾಭವನ್ನು ವಾದಿಯು ತನ್ನ ದಾವೆಯನ್ನು ಸಾಬೀತು ಪಡಿಸಲು ಬಳಸಿಕೊಳ್ಳುವುದು ಸಿಂಧುವಲ್ಲ ಎಂಬ ತೀರ್ಮಾನಿತ ನಿಯಮಗಳ ಅನುಸಾರ ಪ್ರಸ್ತುತ ತೀರ್ಪನ್ನು ನ್ಯಾಯಾಲಯವು ಈ ಮುಂದಿನಂತೆ ಸಕಾರಣೆಗಳನ್ನು ನೀಡಿದೆ.

12. ಸದರಿ ವಿವಾದಾಂಶಕ್ಕೆ ಸಂಬಂಧಿಸಿದಂತೆ ವಾದಿ ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರಾಗಿದ್ದು, ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಆಗಿರುತ್ತದೆ ಎಂಬುದನ್ನು ರುಜುವಾತು ಪಡಿಸುವಂತಹ ಭಾರವು ವಾದಿಯ ಮೇಲೆ ಇದ್ದು ವಾದಿ ಮತ್ತು ಪ್ರತಿವಾದಿಯರ ಮೂಲಪುರುಷ ಹನುಮಂತಪ್ಪ ಇವರಿಗೆ ಇಬ್ಬರು ಪತ್ನಿಯರು ಇದ್ದು ಮೊದಲನೆಯವರು ದೊಡ್ಡಮ್ಮ ಎರಡನೆಯವರು ಸಿದ್ದಮ್ಮ ಆಗಿರುತ್ತಾರೆ. ದೊಡ್ಡಮ್ಮ ಇವರಿಗೆ ತಿಮ್ಮಯ್ಯ ಎಂಬ ಮಗನಿದ್ದು

ಅವರ ಹೆಂಡತಿ ಕರಿಯಮ್ಮ ಆಗಿರುತ್ತಾರೆ ಮತ್ತು ಅವರಿಗೆ ಮಳಿಯಮ್ಮ ಲಕ್ಷ್ಮಮ್ಮ ಮತ್ತು ಗೌರಮ್ಮ ಎನ್ನುವ ಮೂರು ಜನ ಮಕ್ಕಳಿದ್ದು ಎಲ್ಲರೂ ಮರಣ ಹೊಂದಿರುವುದಾಗಿ ತಿಳಿಸಿರುತ್ತಾರೆ. ಎರಡನೇ ಪತ್ನಿಯಾದ ಸಿದ್ದಮ್ಮ ಇವರಿಗೆ ತಿಮ್ಮಯ್ಯ, ಗೋವಿಂದಪ್ಪ ಮತ್ತು ಸೀತಾರಾಮಯ್ಯ ಎಂಬ 3 ಜನ ಮಕ್ಕಳಿದ್ದು ಮೊದಲನೇ ಮಗ ತಿಮ್ಮಯ್ಯ ಇವರಿಗೆ ನಾಗಮ್ಮ ಎಂಬ ಪತ್ನಿಯಿದ್ದು ಅವರು ಪ್ರತಿವಾದಿ-1 ಆಗಿರುತ್ತಾರೆ ಅವರಿಗೆ 3 ಜನ ಮಕ್ಕಳಿದ್ದು ಹನುಮಂತಪ್ಪ , ಶಿವಮೂರ್ತಿ ಮತ್ತು ರಾಜಪ್ಪ ಆಗಿರುತ್ತಾರೆ. ಹನುಮಂತಪ್ಪ ಪ್ರತಿವಾದಿ-2, ಶಿವಮೂರ್ತಿ ಪ್ರತಿವಾದಿ-3, ರಾಜಪ್ಪ ಪ್ರತಿವಾದಿ-4 ಆಗಿರುತ್ತಾರೆ. 2 ನೇ ಮಗನಾದಂತಹ ಗೋವಿಂದಪ್ಪ ಇವರಿಗೆ ಬಸಮ್ಮ ಎಂಬ ಹೆಂಡತಿ ಇದ್ದು ಇಬ್ಬರೂ ಮರಣ ಹೊಂದಿರುತ್ತಾರೆ. ಅವರಿಗೆ 3 ಜನ ಮಕ್ಕಳಿದ್ದು ಮುದ್ದಪ್ಪ ಪ್ರತಿವಾದಿ-5, ಪ್ರಹ್ಲಾದ ವಾದಿ , ಶಿವಣ್ಣ ಪ್ರತಿವಾದಿ -6 ಆಗಿರುತ್ತಾರೆ. 3 ನೇ ಮಗನಾದ ಸೀತಾರಾಮಯ್ಯ ಇವರಿಗೆ ಕಲಮ್ಮ ಎಂಬ ಪತ್ನಿ ಇದ್ದು ಇಬ್ಬರೂ ಸಹ ಮರಣ ಹೊಂದಿದ್ದು ಅವರಿಗೆ ಎಂ ಹೆಚ್ ಬಸವರಾಜು ಪ್ರತಿವಾದಿ - 7 ಮತ್ತು ಎಂ ಹೆಚ್ ಯತೀಶ್ ಕುಮಾರ್ ಪ್ರತಿವಾದಿ - 8 ಆಗಿರುತ್ತಾರೆ ಎಂದು ತಿಳಿಸಿರುತ್ತಾರೆ.

13. ವಾದಿಯು ತನ್ನ ಅಜ್ಜನಾದ ಹನುಮಂತಪ್ಪ ಇವರು ದಾವಾ ಸ್ವತ್ತುಗಳನ್ನು ವಂಶ ಪಾರಂಪರ್ಯವಾಗಿ ಪಡೆದುಕೊಂಡಿರುತ್ತಾರೆ ಎಂಬುದಾಗಿ ತಿಳಿಸಿದ್ದು ಸದರಿ ದಾವಾ ಸ್ವತ್ತುಗಳನ್ನು ತನ್ನ ಇಬ್ಬರು ಪತ್ನಿಯರು ಮತ್ತು ಅವರ ಮಕ್ಕಳೊಂದಿಗೆ ವಂಶ ಪಾರಂಪರ್ಯವಾಗಿ ಅನುಭವಿಸಿಕೊಂಡು ಬಂದಿರುವುದಾಗಿ ತಿಳಿಸಿದ್ದು, ಹನುಮಂತಪ್ಪನವರ ಮೊದಲನೇ ಹೆಂಡತಿ ಮತ್ತು ಅವರ ಮಕ್ಕಳು ಮರಣ ಹೊಂದಿದ ನಂತರ 2 ನೇ ಹೆಂಡತಿಯ ಮಕ್ಕಳು ಮರಣ ಹೊಂದಿದ ನಂತರ ವಾದಿ ಮತ್ತು ಪ್ರತಿವಾದಿಯರು ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದುದರಿಂದ ಜಂಟಿಯಾಗಿ ಅನುಭವಿಸಿಕೊಂಡು ಬಂದಿರುತ್ತಾರೆ. ಹನುಮಂತಪ್ಪ, ತಿಮ್ಮಯ್ಯ, ಗೋವಿಂದಪ್ಪ ಮತ್ತು ಸೀತಾರಾಮಯ್ಯ

ಇವರು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಬಂದ ಸದಸ್ಯರಾಗಿದ್ದು ಮರಣ ಹೊಂದಿರುತ್ತಾರೆ ಎಂದು ತಿಳಿಸಿರುತ್ತಾರೆ.

14. ವಾದಿ ಮತ್ತು ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು 2ನೇ ಪ್ರತಿವಾದಿಯು ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಮುಖ್ಯಸ್ಥನಾಗಿರುತ್ತಾನೆ. ದಾವಾ ಸ್ವತ್ತುಗಳು ಪ್ರತಿವಾದಿ-2 ರಿಂದ 4 ರವರ ಜಂಟಿ ಹೆಸರಿನಲ್ಲಿ ಇರುತ್ತದೆ. ಪ್ರತಿವಾದಿಗಳಿಗೆ ಮಾತ್ರ ಯಾವುದೇ ಸ್ವತಂತ್ರವಾದ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ. ಪ್ರತಿವಾದಿ-1 ರವರು ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಕರ್ತನಾಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಪ್ರತಿವಾದಿಗಳು ವಾದಿಯು ತನ್ನ ಪಾಲಿಗೆ ಬರಬೇಕಾದಂತಹ ಆಸ್ತಿಯನ್ನು ಕೇಳಿದಾಗ ನಿರಾಕರಿಸಿರುತ್ತಾರೆ ಎಂಬ ಅಂಶಗಳನ್ನು ಸಾಬೀತು ಪಡಿಸಲು ವಾದಿ ತಾನು ಪಿ ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಟ್ಟು ತಮ್ಮ ವಾದ ಪತ್ರದಲ್ಲಿರುವ ಅಂಶಗಳಿಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಹಾಗೂ ವಾದಿ ನಿಪಿ.1 ರಿಂದ 7 ಎಂದು ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

15. ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಆರೋಪಿಸುವುದೇನೆಂದರೆ ಹನುಮಂತಪ್ಪ ಇವರಿಗೆ ದೊಡ್ಡಮ್ಮ ಎನ್ನುವ ಏಕಮಾತ್ರ ಪತ್ನಿ ಇದ್ದು ಅವರು ಯಾವುದೇ 2ನೇ ವಿವಾಹ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ ಮತ್ತು 1ನೇ ಪ್ರತಿವಾದಿಯ ನಾಗಮ್ಮಳ ಗಂಡನ ತಂದೆ ಮೃತ ಹನುಮಂತಪ್ಪ ಮತ್ತು ಈತನ ಸಹೋದರ ಬಡಕಪ್ಪ ಎನ್ನುವ ಇವರಿಬ್ಬರೂ ಒಂದೇ ತಾಯಿಯ ಮಕ್ಕಳು ಇರುತ್ತಾರೆ. ಸದರಿ ಮೃತ ಹನುಮಂತಪ್ಪನ ತಮ್ಮ ಬಡಕಪ್ಪನಿಗೆ ತಿಮ್ಮಯ್ಯ ಎನ್ನುವ ಒಬ್ಬನೇ ಮಗನಿದ್ದು ಈಗ ಆತನು ಮೃತ ಹೊಂದಿರುತ್ತಾನೆ. ಸದರಿ ಬಡಕಪ್ಪನ ಮಗ ಮೃತ ತಿಮ್ಮಯ್ಯನವರಿಗೆ ಮೂರು ಜನ ಹೆಣ್ಣುಮಕ್ಕಳಿದ್ದು 1ನೇ

ಮಲಿಯಮ್ಮ. 2 ನೇ ಲಕ್ಷ್ಮಮ್ಮ. 3 ನೇ ಗೌರಮ್ಮ ಎನ್ನುವವರು ಇದ್ದು ಅವರಿಗೆ ವಿವಾಹವಾಗಿ ನಂತರ 3 ಜನರು ಮೃತಹೊಂದಿರುತ್ತಾರೆ ಎಂದು ತಿಳಿಸಿರುತ್ತಾರೆ.

16. ಹನಮಂತಪ್ಪನವರ 3 ಜನ ಮಕ್ಕಳಾದಂತಹ ತಿಮ್ಮಯ್ಯ, ಗೋವಿಂದಪ್ಪ ಮತ್ತು ಸೀತಾರಾಮಯ್ಯನವರು ಅವರ ಜೀವಿತ ಕಾಲದಲ್ಲಿ ಪಾಲು ವಿಭಾಗವನ್ನು ಮಾಡಿಕೊಂಡು ಪ್ರತ್ಯೇಕವಾಗಿ ತಮ್ಮ ಹಿಸ್ಸೆಗೆ ಬಂದಂತಹ ಸ್ವತ್ತುಗಳನ್ನು ಅನುಭವಿಸಿಕೊಂಡು ಬಂದಿರುತ್ತಾರೆ. 4 ರಿಂದ 7 ದಾವಾ ಸ್ವತ್ತುಗಳನ್ನು 3 ಜನರೂ ಸರಿ ಸಮಾನವಾಗಿ ಹಂಚಿಕೊಂಡು ತಮ್ಮ ಹಿಸ್ಸೆಗೆ ಬಂದಂತಹ ಪಿತ್ರಾರ್ಜಿತ ಸ್ವತ್ತುಗಳನ್ನು ಅನುಭವಿಸಿಕೊಂಡು ಬಂದಿರುತ್ತಾರೆ. ತಿಮ್ಮಯ್ಯ ಇವರು ವಿಭಾಗದ ನಂತರ ದಾವಾ 1 ರಿಂದ 3 ರ ಸ್ವತ್ತುಗಳನ್ನು ತಾವು ಸ್ವಯಾರ್ಜಿತವಾಗಿ ಗಳಿಸಿದಂತಹ ಸ್ವತ್ತುಗಳು ಆಗಿರುತ್ತವೆ. ದಾವಾ 1 ಮತ್ತು 2 ನೇ ಸ್ವತ್ತುಗಳನ್ನು 1 ನೇ ಪ್ರತಿವಾದಿಯ ಗಂಡನಾದಂತಹ ತಿಮ್ಮಯ್ಯನವರು ಕ್ರಯಕ್ಕೆ ಕೊಂಡುಕೊಂಡಿರುವಂತಹ ಸ್ವತ್ತುಗಳು ಆಗಿರುತ್ತವೆ. ಮತ್ತು 3 ನೇ ದಾವಾ ಸ್ವತ್ತನ್ನು ಸಹ ತಿಮ್ಮಯ್ಯನವರೇ ಸಂಪಾದಿಸಿದಂತಹ ಸ್ವತ್ತು ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

17. ಪ್ರತಿವಾದಿಗಳು ತಮ್ಮ ಪರವಾಗಿ ಯಾವುದೇ ಸಾಕ್ಷಿ ವಿಚಾರಣೆ ಮಾಡಿಕೊಂಡಿರುವುದಿಲ್ಲ ಮತ್ತು ತಮ್ಮ ಪರವಾಗಿ ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ. ಮತ್ತು ಪಿ ಡಬ್ಲ್ಯೂ-1 ಇವರನ್ನು ಸಹ ಪಾಟೀ ಸವಾಲು ಮಾಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರು ಆಗಿರುವುದಿಲ್ಲ ಎಂಬುದಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳು ಯಾವುದೇ ದಾಖಲಾತಿ ಸಾಕ್ಷ್ಯವನ್ನಾಗಲೀ ಅಥವಾ ಮೌಖಿಕ ಸಾಕ್ಷ್ಯವನ್ನಾಗಲೀ ನೀಡಿರುವುದಿಲ್ಲ.

18. ವಾದಿಗಳ ಪರ ಗುರುತಿಸಿಕೊಂಡಂತಹ ನಿಶಾನೆಗಳನ್ನು ಅವಲೋಕಿಸಿದಾಗ ನಿಪಿ.1 ರಿಂದ 7 ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳು ಆಗಿದ್ದು , ನಿಪಿ.1 ದಾವಾ 1 ನೇ ಸ್ವತ್ತಿಗೆ ಸಂಬಂಧಿಸಿದ ಪಹಣಿ ಆಗಿದ್ದು , 2 ರಿಂದ 4 ನೇ ಪ್ರತಿವಾದಿಯರ ಹೆಸರಿಗೆ ಜಂಟಿಯಾಗಿ ಇದ್ದು ಮತ್ತು ಅವುಗಳು ಪೌತಿವಾರಸು ಮುಖಾಂತರ 2 ರಿಂದ 4 ನೇ ಪ್ರತಿವಾದಿಯರ ಹೆಸರಿನಲ್ಲಿ ಜಂಟಿಯಾಗಿ ಇರುವುದು ಕಂಡುಬರುತ್ತದೆ.

19. ನಿಪಿ.2 ದಾವಾ 2 ನೇ ಸ್ವತ್ತಿಗೆ ಸಂಬಂಧಿಸಿದ ಪಹಣಿ ಆಗಿದ್ದು ತಿಮ್ಮಪ್ಪ ಬಿನ್ ಸಣ್ಣತಿಮ್ಮಪ್ಪ , ಭೀಮಣ್ಣ ಬಿನ್ ಸಣ್ಣ ತಿಮ್ಮಪ್ಪ , ಹನುಮಂತಪ್ಪ , ಶಿವಮೂರ್ತಿ ಮತ್ತು ರಾಜಪ್ಪ ಎಂಬುವವರ ಹೆಸರಿನಲ್ಲಿ ಒಟ್ಟು 16 ಎಕರೆ 21 ಗುಂಟೆ ಜಂಟಿಯಾಗಿ ಇದ್ದು ಮತ್ತು ನಿಪಿ.2 ರ ಕಲಂ ನಂ.10 ರಲ್ಲಿ ಪಿತ್ರಾರ್ಜಿತ ಎಂದು ಜಂಟಿಯಾಗಿ ಇರುವಂತಹದ್ದು ಕಂಡುಬರುತ್ತದೆ. ನಿಪಿ.3 ದಾವಾ 3 ನೇ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಾಗಿದ್ದು ಟಿ. ಹನುಮಂತಪ್ಪ ಇವರ ಹೆಸರಿನಲ್ಲಿ ದಾವಾ ಸ್ವತ್ತು ಇರುವಂತಹದ್ದು ಕಂಡುಬರುತ್ತದೆ ಮತ್ತು ಕಬ್ಜೆ ಮತ್ತು ಸ್ವಾಧೀನದ ರೀತಿ ಐ ಹೆಚ್ ಸಿ ಎಂದು ಇರುತ್ತದೆ.

20. ನಿಪಿ.4, 2 ರಿಂದ 4 ನೇ ಪ್ರತಿವಾದಿಯವರ ಹೆಸರಿನಲ್ಲಿ ಜಂಟಿಯಾಗಿ ಇರುವಂತಹದ್ದು ಕಂಡುಬರುತ್ತದೆ ಮತ್ತು ಕಬ್ಜೆ ಮತ್ತು ಸ್ವಾಧೀನದ ರೀತಿ ಐ ಹೆಚ್ ಸಿ/ ವಿಭಜನೆ ಎಂದು ಇರುತ್ತದೆ. ನಿಪಿ.5 ದಾವಾ 5 ನೇ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಾಗಿದ್ದು 2 ರಿಂದ 4 ನೇ ಪ್ರತಿವಾದಿಯವರ ಹೆಸರಿನಲ್ಲಿ ಜಂಟಿಯಾಗಿ ಇರುವಂತಹದ್ದು ಕಂಡುಬರುತ್ತದೆ. ನಿಪಿ.6 ದಾವಾ 6 ನೇ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಾಗಿದ್ದು 2 ರಿಂದ 4 ನೇ ಪ್ರತಿವಾದಿಯವರ ಹೆಸರಿನಲ್ಲಿ ಜಂಟಿಯಾಗಿ ಇರುವಂತಹದ್ದು ಕಂಡುಬರುತ್ತದೆ ಹಾಗೂ ಕಬ್ಜೆ ಮತ್ತು ಸ್ವಾಧೀನದ ರೀತಿ ಒಟ್ಟುಗೂಡಿಸು

ಎಂಬುದಾಗಿ ಇರುತ್ತದೆ.

21. ನಿಪಿ.7 ದಾವಾ 7ನೇ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಾಗಿದ್ದು, ಸದರಿ ಸ್ವತ್ತು ಸಹ 2 ರಿಂದ 4ನೇ ಪ್ರತಿವಾದಿಯವರ ಹೆಸರಿನಲ್ಲಿ ಜಂಟಿಯಾಗಿ ಇರುವಂತಹದ್ದು ಕಂಡುಬರುತ್ತದೆ. ಪ್ರತಿವಾದಿಗಳು ದಾವಾ.1 ರಿಂದ 3ನೇ ಸ್ವತ್ತುಗಳು ತಮ್ಮ ತಂದೆಯಾದ ತಿಮ್ಮಯ್ಯ ಇವರು ಸ್ವಯಾರ್ಜಿತವಾಗಿ ಸಂಪಾದಿಸಿದಂತಹ ಸ್ವತ್ತುಗಳಾಗಿದ್ದು 4 ರಿಂದ 7 ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಾಗಿದ್ದು ಈಗಾಗಲೇ ಅವುಗಳು ವಿಭಾಗವಾಗಿ ತಮ್ಮ ಹಿಸ್ಸೆಗೆ ಬಂದಂತಹ ಸ್ವತ್ತುಗಳನ್ನು ಅನುಭವಿಸಿಕೊಂಡು ಬಂದಿರುವುದಾಗಿ ತಿಳಿಸಿರುತ್ತಾರೆ. ಮತ್ತು ದಾವಾ 1 ಮತ್ತು 2ನೇ ಸ್ವತ್ತುಗಳನ್ನು ಕ್ರಯಕ್ಕೆ ಕೊಂಡುಕೊಂಡಿದ್ದು ದಾವಾ 3ನೇ ಸ್ವತ್ತು ಸಹ ತಮ್ಮ ಜೀವಿತ ಕಾಲದಲ್ಲಿ ಸಂಪಾದಿಸಿದಂತಹ ಸ್ವತ್ತುಗಳು ಆಗಿರುತ್ತವೆ ಎಂಬುದಾಗಿ ತಿಳಿಸಿರುತ್ತಾರೆ. ಸದರಿ ಅಂಶಗಳನ್ನು ರುಜುವಾತುಪಡಿಸುವಂತಹ ಭಾರವನ್ನು ಪ್ರತಿವಾದಿಗಳೇ ಹೊಂದಿದ್ದು, ಇದಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳು ತಮ್ಮ ಪರವಾಗಿ ಯಾವುದೇ ಸಾಕ್ಷ್ಯವನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ ಮತ್ತು ತಮ್ಮ ಪರವಾಗಿ ಯಾವುದೇ ದಾಖಲಾತಿಗಳನ್ನು ಸಹ ನಿಶಾನೆಯಾಗಿ ಗುರುತಿಸಿಕೊಂಡಿರುವುದಿಲ್ಲ. ಪಿ ಡಬ್ಲೂ.1 ಇವರನ್ನು ಸಹ ಪಾಟೀ ಸವಾಲು ಮಾಡಿರುವುದಿಲ್ಲ,

22. ನಿಪಿ.1 ದಾವಾ 1ನೇ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಾಗಿದ್ದು ಅದರಲ್ಲಿ ಪ್ರತಿವಾದಿ 2 ರಿಂದ 4 ರವರ ಹೆಸರಿಗೆ ದಾವಾ ಸ್ವತ್ತು ಜಂಟಿಯಾಗಿದ್ದು ಪೌತಿ ಆಧಾರದ ಮೇಲೆ ಪ್ರತಿವಾದಿ.2 ರಿಂದ 4 ರವರ ಹೆಸರಿಗೆ ಬಂದಿರುವಂತಹದ್ದು ಕಂಡುಬರುತ್ತದೆ. ಪ್ರತಿವಾದಿಗಳು ಹೇಳಿದಂತೆ ಸದರಿ ದಾಖಲಾತಿಗಳನ್ನು ಅವಲೋಕಿಸಿದಾಗ ದಿ. ತಿಮ್ಮಯ್ಯನವರು ಕ್ರಯಕ್ಕೆ ಕೊಂಡುಕೊಂಡಿರುವುದು ಕಂಡುಬರುವುದಿಲ್ಲ.

ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ಸಹ ಪ್ರತಿವಾದಿ.1 ರಿಂದ 4 ರವರು ಹಾಜರುಪಡಿಸಿರುವುದಿಲ್ಲ. ಆದುದರಿಂದ ವಾದಿ ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರಾಗಿದ್ದು , ದಾವಾ 1ನೇ ಸ್ವತ್ತು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತು ಎಂಬುದನ್ನು ವಾದಿಯು ರುಜುವಾತುಪಡಿಸಿರುತ್ತಾರೆ.

23. ನಿಪಿ.2 ದಾವಾ 2ನೇ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಾಗಿರುತ್ತದೆ ಮತ್ತು ಸದರಿ ಪಹಣಿ ಪತ್ರಿಕೆಯಲ್ಲಿ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ತಿಮ್ಮಪ್ಪ ಬಿನ್ ಸಣ್ಣತಿಮ್ಮಪ್ಪ , ಭೀಮಣ್ಣ ಬಿನ್ ಸಣ್ಣ ತಿಮ್ಮಪ್ಪ , ಹನುಮಂತಪ್ಪ , ಶಿವಮೂರ್ತಿ ಮತ್ತು ರಾಜಪ್ಪ ಎಂಬುವವರ ಹೆಸರಿನಲ್ಲಿ ಒಟ್ಟು 16 ಎಕರೆ 21 ಗುಂಟೆ ಜಂಟಿಯಾಗಿ ಇರುತ್ತದೆ ಮತ್ತು ಕಬ್ಜೆ ಸ್ವಾಧೀನದ ರೀತಿ ಪಿತ್ರಾರ್ಜಿತ ಎಂದು ಇದ್ದು ಸದರಿ ಸ್ವತ್ತು ಮೇಲಿನವರ ಹೆಸರಿನಲ್ಲಿ ಜಂಟಿ ಎಂಬುದಾಗಿ ಇರುತ್ತದೆ. ಪ್ರತಿವಾದಿಗಳು ದಿ. ತಿಮ್ಮಯ್ಯನವರು ದಾವಾ-2ನೇ ಸ್ವತ್ತನ್ನು ಕ್ರಯಕ್ಕೆ ಕೊಂಡಲ್ಲಿ ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲಾತಿಗಳನ್ನು ಸಹ ಹಾಜರುಪಡಿಸಿರುವುದಿಲ್ಲ.

24. ವಾದಿಗಳು ಹೇಳಿದಂತೆ ದಾವಾ 2ನೇ ಸ್ವತ್ತು ಪಿತ್ರಾರ್ಜಿತ ಸ್ವತ್ತುಗಳು ಎಂಬುದಾಗಿ ಇದ್ದು ಭೀಮಣ್ಣ ಬಿನ್ ಸಣ್ಣತಿಮ್ಮಪ್ಪ ಇವರ ತಿಮ್ಮಪ್ಪ ಬಿನ್ ಸಣ್ಣ ತಿಮ್ಮಪ್ಪ ಎನ್ನುವವರೊಂದಿಗೆ ಜಂಟಿಯಾಗಿ ಇರುತ್ತದೆ ಮತ್ತು ಭೀಮಣ್ಣ ಬಿನ್ ಸಣ್ಣತಿಮ್ಮಪ್ಪ ಅಥವಾ ತಿಮ್ಮಪ್ಪ ಬಿನ್ ಸಣ್ಣತಿಮ್ಮಪ್ಪ ಇವರ ನಡುವಿನ ಸಂಬಂಧವನ್ನು ಮತ್ತು ಸ್ವಾಧೀನದ ರೀತಿ ಪಿತ್ರಾರ್ಜಿತ ಎಂಬುದಾಗಿದ್ದು ಇವರುಗಳು ಒಟ್ಟು ಕುಟುಂಬದ ಸದಸ್ಯರು ಆಗಿರುತ್ತಾರೋ ಇಲ್ಲವೋ ಎಂಬುದರ ಬಗ್ಗೆ ಯಾವುದೇ ವಿಚಾರವನ್ನು ತಮ್ಮ ವಾದದಲ್ಲಿ ತಿಳಿಸಿರುವುದಿಲ್ಲ ಮತ್ತು ಸದರಿ 2ನೇ ದಾವಾ ಸ್ವತ್ತಿನಲ್ಲಿ

ಒಟ್ಟು 8 ಎಕರೆ 21 ಗುಂಟೆ ಜಮೀನು ಪಿತ್ರಾರ್ಜಿತ ಎಂಬುದಾಗಿ ತಿಳಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ವಾದಿಯು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

25. ದಾವಾ 3 ನೇ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಲ್ಲಿ 2 ರಿಂದ 4 ನೇ ಪ್ರತಿವಾದಿಯವರ ಹೆಸರಿನಲ್ಲಿ ಸ್ವತ್ತು ಇರುವಂತಹದ್ದು ಕಂಡುಬರುತ್ತದೆ ಮತ್ತು ಪ್ರತಿವಾದಿಗಳು ದಾವಾ 3 ನೇ ಸ್ವತ್ತು ತಿಮ್ಮಯ್ಯನವರ ಸ್ವಯಾರ್ಜಿತ ಸ್ವತ್ತು ಎಂಬುದಾಗಿ ಹೇಳಿದ್ದಾಗಿಯೂ ಸಹ ಯಾವ ರೀತಿಯಾಗಿ ಸ್ವಯಾರ್ಜಿತವಾಗಿ ಸಂಪಾದಿಸಿರುತ್ತಾರೆ ಎಂಬುದನ್ನು ಸಹ ಹೇಳಿರುವುದಿಲ್ಲ ಮತ್ತು ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

26. ದಾವಾ 4 ರಿಂದ 7 ನೇ ಸ್ವತ್ತುಗಳು ಸಹ ಪ್ರತಿವಾದಿ.2 ರಿಂದ 4 ರವರ ಹೆಸರಿನಲ್ಲಿ ಜಂಟಿಯಾಗಿ ಇರುವಂತಹದ್ದು ಕಂಡುಬರುತ್ತದೆ ಮತ್ತು ಸದರಿ ದಾವಾ ಸ್ವತ್ತುಗಳು ಪ್ರತಿವಾದಿಗಳು ಹೇಳಿದಂತೆ ಈಗಾಗಲೇ ವಿಭಾಗವಾಗಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಗಳನ್ನಾಗಲೀ ಅಥವಾ ದಾಖಲಾತಿಗಳನ್ನಾಗಲೀ ಪ್ರತಿವಾದಿಗಳು ನೀಡಿರುವುದಿಲ್ಲ ಮತ್ತು ದಾವಾ ಸ್ವತ್ತುಗಳು 2 ರಿಂದ 4 ನೇ ಪ್ರತಿವಾದಿಯರ ಹೆಸರಿನಲ್ಲಿದ್ದು, ಪ್ರತಿವಾದಿಗಳು ಮತ್ತು ವಾದಿಗಳು ಒಟ್ಟು ಕುಟುಂಬದ ಸದಸ್ಯರಾಗಿರುವುದು ಕಂಡುಬರುತ್ತದೆ. ದಾವಾ 2 ನೇ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯು ದಾವಾ 2 ನೇ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತವೆ ಎಂಬುದನ್ನು ರುಜುವಾತು ಪಡಿಸುವಲ್ಲಿ ವಿಫಲರಾಗಿರುತ್ತಾರೆ. ದಾವಾ 1, 3 ರಿಂದ 7 ನೇ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳು ಎಂದು ವಾದಿಯು ಸ್ಪಷ್ಟವಾಗಿ ರುಜುವಾತು ಮಾಡಿರುತ್ತಾರೆ.

ಆದ್ದರಿಂದ ವಾದಿ ವಾದ ಪತ್ರದಲ್ಲಿ ಹೇಳಿದಂತೆ ದಾವಾ ಆಸ್ತಿಗಳಲ್ಲಿ 1, 3 ರಿಂದ 7 ತನ್ನ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳು ಎನ್ನುವುದನ್ನು ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯದ ಮೂಲಕ ಸಾಭೀತುಪಡಿಸಿರುತ್ತಾರೆ. **ಆದಕಾರಣ ವಿವಾದಾಂಶ-1 ನ್ನು ಸಕಾರಾತ್ಮಕ ಎಂದು ಮತ್ತು ವಿವಾದಾಂಶ-2 ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

27. **ವಿವಾದಾಂಶ-3ಃ** ವಾದಿಯು ವಾದ ಪತ್ರದ ಪ್ರಕಾರವಾಗಿ ಹನುಮಂತಪ್ಪನವರಿಗೆ ದೊಡ್ಡಮ್ಮ ಮತ್ತು ಸಿದ್ದಮ್ಮ ಎನ್ನುವ ಇಬ್ಬರು ಹೆಂಡತಿಯರು ಇದ್ದು ಮೊದಲನೇ ಹೆಂಡತಿ ಅವರ ಮಗ ಮತ್ತು 3 ಜನ ಹೆಣ್ಣು ಮಕ್ಕಳು ಮರಣ ಹೊಂದಿರುವುದಾಗಿ ಮತ್ತು 2 ನೇ ಹೆಂಡತಿಗೆ 3 ಜನ ಅಂದರೆ ತಿಮ್ಮಯ್ಯ, ಗೋವಿಂದಪ್ಪ ಮತ್ತು ಸೀತಾರಾಮಯ್ಯ ಎನ್ನುವ ಮಕ್ಕಳಿದ್ದು 3 ಜನರು ಮರಣ ಹೊಂದಿದ್ದು ಮೊದಲನೇ ಮಗ ತಿಮ್ಮಯ್ಯ ನವರ ಪತ್ನಿ ಪ್ರತಿವಾದಿ -1 ಆಗಿದ್ದು , ಅವರಿಗೆ 3 ಜನ ಗಂಡು ಮಕ್ಕಳು ಇದ್ದು ಅವರು ಪ್ರತಿವಾದಿ-2 ರಿಂದ 4 ಆಗಿರುತ್ತಾರೆ. ಮತ್ತು 2 ನೇ ಮಗ ಗೋವಿಂದಪ್ಪನವರಿಗೆ ಬಸಮ್ಮ ಎನ್ನುವ ಹೆಂಡತಿ ಇದ್ದು ಅವರು ಮರಣ ಹೊಂದಿದ್ದು ಅವರಿಗೆ ಪ್ರತಿವಾದಿ-5 ಮೊದಲನೇ ಮಗ ಹಾಗೂ ವಾದಿ 2 ನೇ ಮಗ ಮತ್ತು ಶಿವಣ್ಣ ಪ್ರತಿವಾದಿ-6 ಆಗಿರುತ್ತಾರೆ ಮತ್ತು 3 ನೇ ಮಗ ಸೀತಾರಾಮಯ್ಯ ಮರಣ ಹೊಂದಿದ್ದು ಅವರ ಹೆಂಡತಿ ಕಲಮ್ಮ ಮರಣ ಹೊಂದಿದ್ದು ಅವರಿಗೆ ಪ್ರತಿವಾದಿ 7 ಮತ್ತು 8 ರವರು ಮಕ್ಕಳಾಗಿದ್ದು , ವಾದಿ ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರಾಗಿರುತ್ತಾರೆ ಎಂಬುದನ್ನು ರುಜುವಾತು ಪಡಿಸಿರುತ್ತಾರೆ. ದಾವಾ.1 , 3 ರಿಂದ 7 ಸ್ವತ್ತುಗಳು ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಸ್ವತ್ತುಗಳು ಆಗಿರುತ್ತವೆ ಎಂಬುದನ್ನು ರುಜುವಾತುಪಡಿಸಿದ್ದು , ವಾದಿ , ಪ್ರತಿವಾದಿ 5 ಮತ್ತು 6 ರವರು ಒಟ್ಟಾಗಿ ದಾವಾ ಆಸ್ತಿ ಸಂಖ್ಯೆ 1, 3 ರಿಂದ 7 ಸ್ವತ್ತುಗಳಲ್ಲಿ ತಲಾ

1/3 ನೇ ಹಿಸ್ಸೆಯ ಹಕ್ಕನ್ನು ಹೊಂದಿರುವುದರಿಂದ ದಾವಾ 1, 3 ರಿಂದ 7 ನೇ ಆಸ್ತಿಗಳಲ್ಲಿ ವಾದಿ, ಪ್ರತಿವಾದಿ.5 ಮತ್ತು 6 ರವರು ತಲಾ 1/3 ಹಾಗೂ ಅವುಗಳ ಪ್ರತ್ಯೇಕ ಸ್ವಾಧೀನತೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಮತ್ತು ಪ್ರತಿವಾದಿ 1 ರಿಂದ 4 ರವರು ಒಟ್ಟಾಗಿ ದಾವಾ ಆಸ್ತಿ ಸಂಖ್ಯೆ 1, 3 ರಿಂದ 7 ಸ್ವತ್ತುಗಳಲ್ಲಿ ತಲಾ 1/3 ನೇ ಹಿಸ್ಸೆಯ ಹಕ್ಕನ್ನು ಹೊಂದಿರುವುದರಿಂದ ದಾವಾ 1, 3 ರಿಂದ 7 ನೇ ಆಸ್ತಿಗಳಲ್ಲಿ ಪ್ರತಿವಾದಿ.1 ರಿಂದ 4 ರವರು ತಲಾ 1/3 ಹಾಗೂ ಅವುಗಳ ಪ್ರತ್ಯೇಕ ಸ್ವಾಧೀನತೆಯನ್ನು ಪಡೆಯಲು ಅರ್ಹರಾಗಿರುತ್ತಾರೆ ಮತ್ತು ಅದೇ ರೀತಿ ಪ್ರತಿವಾದಿ 7 ಮತ್ತು 8 ರವರು ಒಟ್ಟಾಗಿ ದಾವಾ ಆಸ್ತಿ ಸಂಖ್ಯೆ 1, 3 ರಿಂದ 7 ಸ್ವತ್ತುಗಳಲ್ಲಿ ತಲಾ 1/3 ನೇ ಹಿಸ್ಸೆಯ ಹಕ್ಕನ್ನು ಹೊಂದಿರುವುದರಿಂದ ದಾವಾ 1, 3 ರಿಂದ 7 ನೇ ಆಸ್ತಿಗಳಲ್ಲಿ ಪ್ರತಿವಾದಿ.7 ಮತ್ತು 8 ರವರು ತಲಾ 1/3 ಹಾಗೂ ಅವುಗಳ ಪ್ರತ್ಯೇಕ ಸ್ವಾಧೀನತೆಯನ್ನು ಪಡೆಯಲು ಅರ್ಹರಾಗಿರುತ್ತಾರೆ ಎಂದು ತೀರ್ಮಾನಿಸಿ **ವಿವಾದಾಂಶ-3 ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**28**. **ವಿವಾದಾಂಶ-4** -ಮೇಲಿನ ವಿವಾದಾಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಈ ಕೆಳಕಂಡಂತೆ ಮಾಡಿದಃ

**ಆದೇಶ**

ವಾದಿಯ ದಾವೆಯನ್ನು ಖರ್ಚು ಸಹಿತ ಈ ಕೆಳಗಿನಂತೆ ಡಿಕ್ರಿಗೊಳಿಸಲಾಗಿದೆ.

ವಾದಿ ಮತ್ತು ಪ್ರತಿವಾದಿ-5 ಮತ್ತು 6 ರವರು ಒಟ್ಟಾಗಿ ದಾವಾ ಆಸ್ತಿ ಸಂಖ್ಯೆ 1, 3 ರಿಂದ 7 ಸ್ವತ್ತುಗಳಲ್ಲಿ ತಲಾ 1/3 ನೇ ಹಿಸ್ಸೆ ಹಾಗೂ ಅವುಗಳ ಪ್ರತ್ಯೇಕ

ಸ್ವಾಧೀನತೆಯನ್ನು ಪಡೆಯಲು ಅರ್ಹರಾಗಿರುತ್ತಾರೆಂದು,

ಪ್ರತಿವಾದಿ 1 ರಿಂದ 4 ರವರು ಒಟ್ಟಾಗಿ ದಾವಾ ಆಸ್ತಿ ಸಂಖ್ಯೆ 1, 3 ರಿಂದ 7 ಸ್ವತ್ತುಗಳಲ್ಲಿ ತಲಾ 1/3 ನೇ ಹಿಸ್ಸೆ ಹಾಗೂ ಅವುಗಳ ಪ್ರತ್ಯೇಕ ಸ್ವಾಧೀನತೆಯನ್ನು ಪಡೆಯಲು ಅರ್ಹರಾಗಿರುತ್ತಾರೆಂದು

ಮತ್ತು ಅದೇ ರೀತಿ ಪ್ರತಿವಾದಿ 7 ಮತ್ತು 8 ರವರು ಒಟ್ಟಾಗಿ ದಾವಾ ಆಸ್ತಿ ಸಂಖ್ಯೆ 1, 3 ರಿಂದ 7 ಸ್ವತ್ತುಗಳಲ್ಲಿ ತಲಾ 1/3 ನೇ ಹಿಸ್ಸೆ ಹಾಗೂ ಅವುಗಳ ಪ್ರತ್ಯೇಕ ಸ್ವಾಧೀನತೆಯನ್ನು ಪಡೆಯಲು ಅರ್ಹರಾಗಿರುತ್ತಾರೆಂದು ಆದೇಶಿಸಲಾಗಿರುತ್ತದೆ.

ಮೇಲ್ಕಂಡಂತೆ ಪ್ರಾಥಮಿಕ ಡಿಕ್ರಿ ಬರೆಯತಕ್ಕದ್ದು.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣವಾದ ಸಿವಿಲ್ ಮೇಲ್ಮನವಿ ಸಂಖ್ಯೆಃ6406-6407/2010 (Kuttukandi Edathi Krishan and another Vs. Kattukandi Edathi Valsan and others) ರಲ್ಲಿನ ನಿರ್ದೇಶನದಂತೆ, ದಿವಾಣಿ ಪ್ರಕ್ರಿಯೆ ಸಂಹಿತೆ ಕ್ರಮಾದೇಶ 20 ನಿಯಮ 18 ರ ಅಡಿಯಲ್ಲಿ ಹೇಳಿದಂತೆ, ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯ ಸಲುವಾಗಿ, ಅಂತಿಮ ಡಿಕ್ರಿ ಪ್ರಕರಣವಾಗಿ ಪರಿವರ್ತಿಸಿ ದಿನಾಂಕಃ 24.06.2026 ರಂದು ಕರೆಯಿಸಲು ಈ ಮೂಲಕ ಕಛೇರಿಗೆ ನಿರ್ದೇಶಿಸಿ ಆದೇಶಿಸಿದೆ.

ದಿನಾಂಕಃ 24.06.2026 ರಂದು ಅಂತಿಮ ಡಿಕ್ರಿ ಪ್ರಕ್ರಿಯೆಯಲ್ಲಿ ಉಭಯ ಪಕ್ಷಗಾರರು ಹಾಜರಾಗತಕ್ಕದ್ದು.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ನಂತರ ಅವರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ, ಇಂದು **ದಿನಾಂಕ 23 ನೇ ಮಾರ್ಚ್ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ತ್ರಿನೇತ್ರ ಎಂ. ಎನ್)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹೊಸದುರ್ಗ.**

**<u>ಅನುಬಂಧಃ-</u>**

**<u>ವಾದಿಯ ಪರ ವಿಚಾರಣೆ ಮಾಡಲಾದ ಸಾಕ್ಷಿಃ</u>**

ಪಿಡಬ್ಲ್ಯೂ-01 – ಶ್ರೀ ಪ್ರಹ್ಲಾದ

**<u>ವಾದಿಯ ಪರ ಗುರುತಿಸಲಾದ ದಾಖಲೆಗಳುಃ</u>**

| | | |
|---|---|---|
| ನಿ.ಪಿ.1 | - | ಆರ್ ಟಿ ಸಿ ಸ. ನಂ. 91/2 ಸಿ |
| ನಿ.ಪಿ.2 | - | ಆರ್ ಟಿ ಸಿ ಸ. ನಂ. 264 |
| ನಿ.ಪಿ.3 | - | ಆರ್ ಟಿ ಸಿ ಸ. ನಂ. 271 |
| ನಿ.ಪಿ.4 | - | ಆರ್ ಟಿ ಸಿ ಸ. ನಂ. 41/9 |
| ನಿ.ಪಿ.5 | - | ಆರ್ ಟಿ ಸಿ ಸ. ನಂ. 31/4 |
| ನಿ.ಪಿ.6 | - | ಆರ್ ಟಿ ಸಿ ಸ. ನಂ. 24/1 |
| ನಿ.ಪಿ.7 | - | ಆರ್ ಟಿ ಸಿ ಸ. ನಂ. 34/4 |

**<u>ಪ್ರತಿವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿಃ</u>**

ಇಲ್ಲಾ

<u>ಪ್ರತಿವಾದಿಯರ ಪರ ಗುರುತಿಸಲಾದ ದಾಖಲೆಗಳು:</u>

ಇಲ್ಲಾ

THRINETHRA M N

Digitally signed by THRINETHRA M N
Date: 2026.03.27 15:24:41 +0530

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಹೊಸದುರ್ಗ.**